ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 462 ಎಸಿಎಂ (2) 2012-13

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001
ದಿನಾಂಕ: 17-05-2013

# ಪ್ರವೇಶಾಧಿಸೂಚನೆ

**ವಿಷಯ:** 2013-14ನೇ ಸಾಲಿನ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಡಿಪ್ಲೋಮಾ ಕೋರ್ಸ್‌ಗಳಿಗೆ ರಾಜ್ಯದ 11 Online Interactive Cunseling ಕೇಂದ್ರಗಳ ಮೂಲಕ ಅರ್ಹ ಅಭ್ಯರ್ಥಿಗಳಗೆ ಸೀಟು ಹಂಚಿಕೆ ಮಾಡುವ ಸಂಬಂಧದಲ್ಲಿ ಪ್ರವೇಶಾಧಿಸೂಚನೆ ನೀಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಎಸ್‌ಡಬ್ಲ್ಯೂಡಿ 3 ಬಿಸಿಎ 2002, ದಿನಾಂಕ: 30/03/2002. (ಮೀಸಲಾತಿಗೆ ಸಂಬಂಧಿಸಿದಂತೆ)
2. ಸರ್ಕಾರದ ಆದೇಶ ಸಂ: ಇಡಿ 195 ಟಿಪಿಇ 2003, ದಿ: 07/06/2003 (ಸೆಮಿಸ್ಟರ್ ಪದ್ಧತಿ ಜಾರಿ ಮತ್ತು ಕೇಂದ್ರೀಕೃತ ಪ್ರವೇಶಕ್ಕೆ ಸಂಬಂಧಿಸಿದಂತೆ)
3. ಸರ್ಕಾರದ ಆದೇಶ ಸಂ: ಇಡಿ 106 ಟಿಪಿಇ 2005, ದಿನಾಂಕ: 06/05/2005 & ಇಡಿ/99/ಟಿಪಿಇ/2011, ದಿ:29-04-2011. (ಕನಿಷ್ಟ ವಿದ್ಯಾರ್ಹತೆಗೆ ಸಂಬಂಧಿಸಿದಂತೆ)
4. ಸರ್ಕಾರದ ಆದೇಶ ಸಂ: ಇಡಿ 119 ಟಿಪಿಇ 2005, ದಿ: 18/10/2005 (ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ)
5. ಸರ್ಕಾರದ ಆದೇಶ ಸಂ: ಇಡಿ 119 ಟಿಪಿಇ 2005, ದಿ: 18/10/2005 (ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ)
6. ಸರ್ಕಾರದ ಆದೇಶ ಸಂ. ಇಡಿ 10 ಟಿಪಿಇ 2012, ದಿ:20-05-2012. (ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ)
7. ಸರ್ಕಾರದ ಆದೇಶ ಸಂ. ಇಡಿ 40 ಟಿಪಿಇ 2013, ದಿ:19-03-2013.

**-000000000-**

ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ 2013-14ನೇ ಸಾಲಿಗೆ ಪೂರ್ಣಾವಧಿಯ ಇಂಜಿನಿಯರಿಂಗ್ ಮತ್ತು ನಾನ್ ಇಂಜಿನಿಯರಿಂಗ್ ಡಿಪ್ಲೊಮೊ ವ್ಯಾಸಂಗಗಳ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.

1. **ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆಗೆ ಸಮಾನವಾದ ಕೋರ್ಸ್‌ಗಳ ಪ್ರವೇಶಕ್ಕೆ ಇರಬೇಕಾದ ಕನಿಷ್ಟ ಶಿಕ್ಷಣಾರ್ಹತೆಗಳು:**

**ಅ) ಇಂಜಿನಿಯರಿಂಗ್ ಕೋರ್ಸುಗಳಿಗೆ;**

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕರ್ನಾಟಕ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಒಟ್ಟಾರೆ ಶೇ. 35 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

**ಆ) ನಾನ್ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ:**

ಕಮರ್ಷಿಯಲ್ ಪ್ರಾಕ್ಟೀಸ್ ಮತ್ತು ಅಪರಲ್ ಡಿಸೈನ್ ಮತ್ತು ಫ್ಯಾಬ್ರಿಕೇಷನ್ ಟೆಕ್ನಾಲಜಿ ಕೋರ್ಸುಗಳಿಗೆ:- ಕರ್ನಾಟಕ ಎಸ್.ಎಸ್.ಎಲ್.ಸಿ. ಅಥವ ತತ್ಸಮಾನ ಪರೀಕ್ಷೆಯಲ್ಲಿ ಒಟ್ಟಾರೆ ಶೇ.35 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

2. **ದ್ವಿತೀಯ ಪಿಯುಸಿಗೆ ಸಮಾನವಾದ ಕೋರ್ಸ್‌ಗಳ ಪ್ರವೇಶಕ್ಕೆ ಇರಬೇಕಾದ ಕನಿಷ್ಠ ವಿದ್ಯಾರ್ಹತೆ:**

*ಅ) ಸಿನಿಮಾಟೋಗ್ರಫಿ ಮತ್ತು ಸೌಂಡ್ ರೆಕಾರ್ಡಿಂಗ್ & ಇಂಜಿನಿಯರಿಂಗ್ ಕೋರ್ಸ್‌ಗಳಿಗೆ:-*

ಮೇಲ್ಕಂಡ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಕರ್ನಾಟಕ ದ್ವಿತೀಯ ಪಿಯುಸಿ (PCM) ಅಥವ ತತ್ಸಮಾನ ಪರೀಕ್ಷೆಯಲ್ಲಿ ಒಟ್ಟಾರೆ ಶೇ.35 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

**ಆ) ಲೈಬ್ರರಿ ಸೈನ್ಸ್ & ಇನ್‌ಫರ್ಮೇಷನ್ ಮೆನೇಜ್‌ಮೆಂಟ್ ಹಾಗೂ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಕೋರ್ಸ್‌ಗಳಿಗೆ:**

ಕರ್ನಾಟಕ ದ್ವಿತೀಯ ಪಿ.ಯು.ಸಿ ಅಥವ ತತ್ಸಮಾನ ಪರೀಕ್ಷೆಯಲ್ಲಿ ಒಟ್ಟಾರೆ ಶೇ.35 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

3. **ಪ್ರವೇಶಕ್ಕೆ ಇರಬೇಕಾದ ಇತರೇ ಅರ್ಹತೆಗಳು:**

ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು ಹಾಗೂ ಅರ್ಜಿಸಲ್ಲಿಸುವ ಪೂರ್ವದಲ್ಲಿ ಕರ್ನಾಟಕದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯನ್ನೊಳಗೊಂಡು ಕನಿಷ್ಠ ಐದು ವರ್ಷಗಳವರೆಗೆ ವ್ಯಾಸಂಗ ಮಾಡಿರಬೇಕು, ಆದಾಗ್ಯೂ 05 ವರ್ಷಗಳ ವ್ಯಾಸಂಗದ ಷರತ್ತಿನಿಂದ ಕೆಲವು ಗುಂಪಿನ ಅಭ್ಯರ್ಥಿಗಳಿಗೆ ವಿನಾಯಿತಿ ನೀಡಲಾಗಿದೆ. ಈ ಬಗ್ಗೆ ಅರ್ಜಿಯ ಜೊತೆ ನೀಡಲಾಗಿರುವ ಸೂಚನೆಗಳನ್ನು ಓದುವುದು ಅಥವಾ ಸಂಬಂಧಿಸಿದ ಪಾಲಿಟೆಕ್ನಿಕ್ ಪ್ರಾಚಾರ್ಯರಿಂದ ಮಾಹಿತಿ ಪಡೆಯುವುದು.

4. **ಅರ್ಜಿ ಪಡೆಯುವ ಹಾಗೂ ಸಲ್ಲಿಸುವ ವಿಧಾನ:**

ಅಭ್ಯರ್ಥಿಗಳು ನಿಗದಿತ ಅರ್ಜಿ ಮತ್ತು ಮಾಹಿತಿ ಪುಸ್ತಕವನ್ನು ಸರ್ಕಾರವು ನಿಗಧಿಪಡಿಸಿದ ಅರ್ಜಿ ಶುಲ್ಕವನ್ನು (G.M /II A /II B/III A/III B = ರೂ. 100/- & SC/ST/CAT-1 = ರೂ. 50/-)

**a)** ಕರ್ನಾಟಕ ರಾಜ್ಯದ ಯಾವುದೇ **"STATE BANK OF MYSORE"** ಶಾಖೆಗಳಿಂದ ಉಳಿತಾಯ ಖಾತೆ ಚಲನ್ ಪಡೆದು 'ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು" ಇವರ ಉಳಿತಾಯ ಖಾತೆ ಸಂಖ್ಯೆ:**64097386381** ಗೆ ಶುಲ್ಕ ಪಾವತಿಸಿ, **Counter Foil** ನ್ನು ಪಡೆದು ಈ ಕೆಳಕಂಡ ಯಾವುದೇ **Online Application Submission/Document Verification Centre** ಗಳಲ್ಲಿ ಸಲ್ಲಿಸಿ ಅರ್ಜಿ ಮತ್ತು ಮಾಹಿತಿ ಪುಸ್ತಕವನ್ನು ಪಡೆದುಕೊಳ್ಳುವುದು.

ಅಥವಾ

**b)** ಇತರೇ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ **NEFT Challan** ಪಡೆದು ಈ ಕೆಳಗಿನ ಮಾಹಿತಿಯನ್ನು ನಮೂದಿಸಿ, ನಿಗಧಿತ ಶುಲ್ಕ **NEFT** ಮುಖಾಂತರ ಪಾವತಿಸಿ, ಹಣ ವರ್ಗಾವಣೆಯ ಪ್ರತಿಯನ್ನು ಪಡೆದುಕೊಳ್ಳುವುದು.

| | | | |
|---|---|---|---|
| ಅ) | ಉಳಿತಾಯ ಖಾತೆಯ ಹೆಸರು | : | **The Executive Director, Karnataka Examination Authority** |
| ಆ) | ಉಳಿತಾಯ ಖಾತೆ ಸಂಖ್ಯೆ. | : | **64097386381** |
| ಇ) | ಶಾಖೆಯ ಹೆಸರು | : | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮಲ್ಲೇಶ್ವರಂ, ಬೆಂಗಳೂರು |
| ಈ) | **IFS CODE** | : | **SBMY0040017** |

NEFT ಮುಖಾಂತರ ಹಣ ವರ್ಗಾವಣೆಯ ಪ್ರತಿಯನ್ನು ಈ ಕೆಳಕಂಡ ಯಾವುದೇ Online Application Submission/Document Verification Centre ಗಳಲ್ಲಿ ಸಲ್ಲಿಸಿ ಅರ್ಜಿ ಮತ್ತು ಮಾಹಿತಿ ಪುಸ್ತಕವನ್ನು ಪಡೆದುಕೊಳ್ಳುವುದು.

| Sl. NO. | Inst Code. | Online Application Submission/Document Verification Center |
|---|---|---|
| 1 | **102** | SJ (GOVT) POLYTECHNIC BANGALORE |
| 2 | **103** | KARNATAKA (GOVT)POLYTECHNIC, MANGALORE |
| 3 | **104** | GOVERNMENT POLYTECHNIC, BELLARY |
| 4 | **105** | SMT.L.V.(GOVT) POLYTECHNIC, HASSAN |
| 5 | **106** | D.R.R.(GOVT) POLYTECHNIC, DAVANGERE |
| 6 | **107** | GOVERNMENT POLYTECHNIC, CHINTHAMANI |
| 7 | **108** | CPC(GOVT) POLYTECHNIC, MYSORE |
| 8 | **109** | GOVERNMENT POLYTECNIC, GULBARGA |
| 9 | **110** | D.A.C.G(GOVT) POLYTECHNIC ,CHICKMAGALUR |
| 10 | **111** | GOVERNMENT POLYTECHNIC, CHANNAPATNA |
| 11 | **112** | GOVERNMENT POLYTECHNIC,TUMKUR |
| 12 | **113** | GOVERNMENT POLYTECHNIC, BELGAUM |
| 13 | **114** | GOVERNMENT POLYTECHNIC, KARWAR |
| 14 | **115** | GOVERNMENT POLYTECHNIC, BIDAR |
| 15 | **116** | GOVERNMENT POLYTECHNIC, K.R.PET |
| 16 | **117** | GOVERNMENT POLYTECHNIC, RAICHUR |
| 17 | **118** | GOVERNMENT POLYTECHNIC, KUSHALNAGAR |
| 18 | **119** | GOVERNMENT WOMEN'S POLYTECHNIC, BANGALORE |
| 19 | **120** | GOVERNMENT POLYTECHNIC, BIJAPUR |
| 20 | **121** | GOVERNMENT WOMEN'S POLYTECHNIC, HUBLI |
| 21 | **123** | G.R.INSTITUTE OF COMMERCIAL PRACTISE, BANGALORE |
| 22 | **124** | GOVERNMENT POLYTECHNIC FOR WOMEN, MANGALORE |
| 23 | **125** | S.J.(EVENING)POLYTECHNIC, BANGALORE |
| 24 | **128** | GOVT V.I.S.J POLYTECHNIC, BHADRAVATHI |
| 25 | **130** | GOVERNMENT POLYTECHNIC, CHAMARAJANAGAR |
| 26 | **131** | GOVT. SCHOOL OF MINES, KGF |
| 27 | **132** | GOVERNMENT POLYTECHNIC FOR WOMEN, HASSAN |
| 28 | **135** | GOVT RESIDENTIAL WOMEN'S POLYTECHNIC, SHIMOGA |
| 29 | **136** | GOVERNMENT POLYTECHNIC, BAGEPALLI |
| 30 | **137** | GOVERNMENT POLYTECHNIC, KOPPAL |
| 31 | **138** | GOVERNMENT POLYTECHNIC, KUSHTAGI |
| 32 | **139** | GOVERNMENT POLYTECHNIC, SORABA |
| 33 | **140** | GOVERNMENT FILM &TV TECHNICAL INSTITUTE,BANGALORE |
| 34 | **141** | GOVERNMENT POLYTECHNIC FOR WOMEN, GULBARGA |
| 35 | **142** | GOVERNMENT POLYTECHNIC FOR WOMEN,RAMNAGARA |
| 36 | **147** | GOVERNMENT POLYTECHNIC, GADAGA |
| 37 | **148** | GOVERNMENT POLYTECHNIC, GAJENDRAGAD, GADAG DIST |
| 38 | **149** | GOVERNMENT POLYTECHNIC, CHITRADURGA |
| 39 | **156** | GOVERNMENT POLYTECHNIC, MULABAGILU, KOLAR DIST. |

| | | |
|---|---|---|
| 40 | **161** | GOVERNMENT POLYTECHNIC, APHAJALPURA,GULBARGA DIST |
| 41 | **162** | GOVERNMENT POLYTECHNIC, JOAIDA,UTTAR KANNADA DIST |
| 42 | **175** | GOVERNMENT POLYTECHNIC, IMMADIHALLI |
| 43 | **152** | GOVERNMENT POLYTECHNIC,BAGALKOT |
| 44 | **205** | BVVS POLYTECHNIC, BAGALKOTE |
| 45 | **208** | JSS POLYTECHNIC FOR WOMEN, MYSORE |

**ಹೊರನಾಡು ಮತ್ತು ಗಡಿನಾಡು ಕನ್ನಡಿಗರು/ಸ್ಪೋರ್ಟ್ಸ್ ಮತ್ತು ಗೈಡ್ಸ್ ಕೋಟಾದಲ್ಲಿನ ಅಭ್ಯರ್ಥಿಗಳು ಯಾವುದೇ Online Application Submission/Document Verification Centre ಗಳಲ್ಲಿ ಅರ್ಜಿ ಮತ್ತು ಮಾಹಿತಿ ಪುಸ್ತಕವನ್ನು ಪಡೆದು ಭರ್ತಿ ಮಾಡಿದ ಅರ್ಜಿಯನ್ನು Document Verification Centre ಗಳಲ್ಲಿ ಸಲ್ಲಿಸುವುದು.** ಸ್ಪೋರ್ಟ್ಸ್ / ಗೈಡ್ಸ್, ಹೊರನಾಡು ಕನ್ನಡಿಗ ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳ ಸೀಟು ಆಯ್ಕೆ ಪ್ರಕ್ರಿಯೆಯನ್ನು **ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ತಾಂತ್ರಿಕ ಭವನ, ಅರಮನೆ ರಸ್ತೆ, ಬೆಂಗಳೂರು – 560001. ಇಲ್ಲಿ ದಿನಾಂಕ:05-06-2013ರಂದು ಪೂರ್ವಾಹ್ನ 11.00 ಗಂಟೆಗೆ** ನಡೆಸಲಾಗುವುದು. ಅರ್ಹ ಅಭ್ಯರ್ಥಿಗಳು ಈ ಅಂಶವನ್ನು ತಪ್ಪದೇ ಗಮನಿಸಿ ಸಂಬಂಧಿಸಿದ ಎಲ್ಲ ಮೂಲ ದಾಖಲೆಗಳೊಂದಿಗೆ ಸಂದರ್ಶನಕ್ಕೆ ಹಾಜರಾಗುವುದು.

ಅರ್ಜಿಗಳನ್ನು ದಿನಾಂಕ: **15/05/2013** ರಿಂದ **25/05/2013** ರವರೆಗೆ ರಾಜ್ಯದ **Online Application Submission/Document Verification Centre** ಗಳಲ್ಲಿ ಮಾರಾಟ ಮಾಡಲಾಗುತ್ತದೆ, ಅರ್ಹ ಅಭ್ಯರ್ಥಿಗಳು ಮೇಲ್ಕಂಡ ಅವಧಿಯಲ್ಲಿ ಅರ್ಜಿಗಳನ್ನು ಪಡೆಯಬಹುದಾಗಿದೆ. ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಲಾದ ಅರ್ಜಿಯನ್ನು ಪ್ರವೇಶ ಬಯಸುವ ನೋಡಲ್ ಸೆಂಟರ್‌ಗೆ ದಿನಾಂಕ: **25/05/2013 ರಂದು ಸಂಜೆ 5.30 ಗಂಟೆಯ** ಒಳಗಾಗಿ ಸಲ್ಲಿಸತಕ್ಕದ್ದು. ಆದಾಗ್ಯೂ, ಸಿನಿಮಾಟೋಗ್ರಫಿ ಮತ್ತು ಸೌಂಡ್ ರೆಕಾರ್ಡಿಂಗ್ & ಇಂಜಿನಿಯರಿಂಗ್ ಕೋರ್ಸ್‌ನ ಪ್ರವೇಶಕ್ಕೆ ಸಂಬಂಧಿಸಿದಂತೆ ಪ್ರಿನ್ಸಿಪಾಲರು, ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ, ಬೆಂಗಳೂರು ಇಲ್ಲಿಗೆ ಹಾಗೂ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಕೋರ್ಸ್ ಪ್ರವೇಶಕ್ಕೆ ಸಂಬಂಧಿಸಿದಂತೆ ಪ್ರಿನ್ಸಿಪಾಲರು, ಸರ್ಕಾರಿ ಎಸ್‌ಆರ್‌ಸಿ ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಎಸ್.ಜೆ.ಪಾಲಿಟೆಕ್ನಿಕ್ ಕ್ಯಾಂಪಾಸ್, ಶೇಷಾದ್ರಿ ರಸ್ತೆ, ಬೆಂಗಳೂರು ಇವುಗಳಲ್ಲಿ ಅರ್ಜಿ ಮತ್ತು ಮಾಹಿತಿ ಪುಸ್ತಕವನ್ನು ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ನಿಗಧಿತ ದಿನಾಂಕದೊಳಗೆ ಈ ಸಂಸ್ಥೆಗಳಲ್ಲಿಯೇ ಸಲ್ಲಿಸುವುದು. ಈ ಸಂಸ್ಥೆಗಳಲ್ಲಿಯೇ ಸಲ್ಲಿಸುವುದು. **OFF-LINE ಮುಖಾಂತರ ಪ್ರವೇಶ ಪ್ರಕ್ರಿಯೆಗಳ ವೇಳಾಪಟ್ಟಿಯನ್ನು ಸಂಬಂಧಪಟ್ಟ ಸಂಸ್ಥೆಗಳಲ್ಲಿ ಮತ್ತು ಇಲಾಖೆಯ ವೆಬ್‌ಸೈಟ್‌ಗಳಲ್ಲಿ ಪ್ರಚುರಪಡಿಸಲಾಗುವುದು. ಸೀಟು ಆಯ್ಕೆ ಸಂದರ್ಭದಲ್ಲಿ ಎಲ್ಲಾ ಮೂಲ ದಾಖಲೆ ಮತ್ತು ನಿಗಧಿಪಡಿಸಿದ ಪ್ರವೇಶ ಶುಲ್ಕವನ್ನು ನಗದು ರೂಪದಲ್ಲಿ ಪಾವತಿಸುವುದು ಕಡ್ಡಾಯವಾಗಿದೆ. ಮೂಲದಾಖಲೆಗಳ ಪರಿಶೀಲನೆ ನಂತರ ಸೀಟು ಆಯ್ಕೆ ಪ್ರಕ್ರಿಯೆಗಳಲ್ಲಿ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ.**

ಅಪೂರ್ಣವಾದ ಅರ್ಜಿಗಳನ್ನು ಅಥವಾ ಅಂತಿಮ ದಿನಾಂಕ **25/05/2013 ರ ಸಂಜೆ 5.30 ಗಂಟೆಯ** ನಂತರ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ರಾಜ್ಯದ 11 Online Interactive Cunseling ಪ್ರವೇಶ ಕೇಂದ್ರಗಳು ಹಾಗೂ ಪಾಲಿಟೆಕ್ನಿಕ್‌ಗಳ ವಿವರ ಮತ್ತು ಪ್ರವೇಶಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಪುಸ್ತಕದಲ್ಲಿ ನೀಡಲಾಗಿದೆ. ಅರ್ಜಿ ಸಲ್ಲಿಸುವ ಮುನ್ನ ಅಭ್ಯರ್ಥಿಗಳು ಸೂಚನೆಗಳನ್ನು ಓದಿಕೊಳ್ಳತಕ್ಕದ್ದು.

ಪ್ರವೇಶಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು **45 ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್ (ಆನ್‌ಲೈನ್ ಅರ್ಜಿ ಸಲ್ಲಿಕೆ/ದಾಖಲಾತಿ ಪರಿಶೀಲನಾ ಕೇಂದ್ರ) ಗಳಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ** ಇಲಾಖೆಯ **www.dtekarnataka.in**, **www.diplomaadmission.in** & **www.dte.kar.nic.in** ವೆಬ್‌ಸೈಟ್‌ಗಳಲ್ಲಿ ಪಡೆಯಬಹುದು.

5. **ವಿಶೇಷ ಸೂಚನೆ:**

1. ರಾಜ್ಯದಲ್ಲಿನ ಈ ಕೆಳಕಂಡ 11 Online Interactive Cunseling ಕೇಂದ್ರಗಳ ಮೂಲಕ ಸೀಟು ಹಂಚಿಕೆ ಪ್ರಕ್ರಿಯೆಯನ್ನು ನಡೆಸಲಾಗುತ್ತಿದ್ದು, ಅಭ್ಯರ್ಥಿಗಳು ಹಲವು ಪಾಲಿಟೆಕ್ನಿಕ್‌ಗಳಲ್ಲಿರುವ ಕೋರ್ಸ್‌ಗಳ ಆಯ್ಕೆಯ ಅವಕಾಶವನ್ನು ಒಂದೇ ಕೇಂದ್ರದಲ್ಲಿ ಪಡೆಯಬಹುದಾಗಿರುತ್ತದೆ. ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಪಾರದರ್ಶಕತೆ ಹಾಗೂ ಹೆಚ್ಚಿನ ಪ್ರವೇಶಾವಕಾಶಗಳನ್ನು ಕಲ್ಪಿಸಲಾಗಿದ್ದು, ವಿದ್ಯಾರ್ಥಿಗಳು ಇದನ್ನು ಸದುಪಯೋಗಪಡಿಸಿ ಕೊಳ್ಳಬೇಕೆಂದು ತಿಳಿಸಲಾಗಿದೆ.

| ಕ್ರ.ಸಂ. | Online Interactive Cunseling ಕೇಂದ್ರಗಳು |
|---|---|
| | **ಹಗಲು ಪಾಲಿಟೆಕ್ನಿಕ್ ಪ್ರವೇಶಕ್ಕೆ** |
| 1. | ಸರ್ಕಾರಿ ಎಸ್.ಜೆ ಪಾಲಿಟೆಕ್ನಿಕ್, ಬೆಂಗಳೂರು |
| 2. | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು |
| 3. | ಸರ್ಕಾರಿ ಜಿ.ಆರ್. ಇನ್ಸ್‌ಟಿಟ್ಯೂಟ್ ಆಫ್ ಕಮರ್ಷಿಯಲ್ ಪ್ರಾಕ್ಟೀಸ್, ಬೆಂಗಳೂರು |
| 4. | ಸರ್ಕಾರಿ ಪಾಲಿಟೆಕ್ನಿಕ್, ಗುಲ್ಬರ್ಗಾ |
| 5. | ಡಿ.ಆರ್.ಆರ್ ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ |
| 6. | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ |
| 7. | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ |
| 8. | ಸರ್ಕಾರಿ ಕರ್ನಾಟಕ ಪಾಲಿಟೆಕ್ನಿಕ್, ಮಂಗಳೂರು. |
| 9. | ಶ್ರೀಮತಿ.ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್, ಹಾಸನ. |
| 10. | ಬಿ.ವಿ.ವಿ.ಎಸ್ ಪಾಲಿಟೆಕ್ನಿಕ್, ಬಾಗಲಕೋಟೆ. |
| 11. | ಜೆ.ಎಸ್.ಎಸ್ ಮಹಿಳಾ ಪಾಲಿಟೆಕ್ನಿಕ್, ಮೈಸೂರು. |

2. ಸರ್ಕಾರದ ಆದೇಶ ಸಂಖ್ಯೆ. ಇಡಿ 119 ಟಿಪಿಇ 2005, ದಿನಾಂಕ:18-10-2005 ಮತ್ತು ಸರ್ಕಾರದ ಆದೇಶ ಸಂಖ್ಯೆ. ಇಡಿ 10 ಟಿಪಿಇ 2012, ದಿನಾಂಕ:29-05-2012 ರನ್ವಯ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳಲ್ಲಿನ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಕೆಳಗೆ ನಿಗಧಿಪಡಿಸಿರುವ ಶುಲ್ಕವನ್ನು ಪ್ರವೇಶ ಸಮಯದಲ್ಲಿ ನಗದು ರೂಪದಲ್ಲಿ ಕಡ್ಡಾಯವಾಗಿ ಪಾವತಿಸಬೇಕು. ತಪ್ಪಿದಲ್ಲಿ ಪ್ರವೇಶಕ್ಕೆ ಪರಿಗಣಿಸಲಾಗುವುದಿಲ್ಲ.

| ಕ್ರ. ಸಂ. | ಪಾಲಿಟೆಕ್ನಿಕ್ | ಬೋಧನಾ ಶುಲ್ಕ | ಅಭಿವೃದ್ಧಿ ಶುಲ್ಕ | ಇತರೆ ಶುಲ್ಕ | ಒಟ್ಟು |
|---|---|---|---|---|---|
| 1. | ಸರ್ಕಾರಿ ಪಾಲಿಟೆಕ್ನಿಕ್ | ₹ 2,300/- | ₹ 500/- | ₹ 800/- | ₹ 3,600/- |
| 2. | ಅನುದಾನಿತ ಪಾಲಿಟೆಕ್ನಿಕ್ | ₹ 4,400/- | ₹ 500/- | ₹ 800/- | ₹ 5,700/- |
| 3. | ಖಾಸಗಿ ಪಾಲಿಟೆಕ್ನಿಕ್ | ₹ 9,450/- | ₹ 500/- | ₹ 800/- | ₹ 10,750/- |

3. ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಇರಬೇಕಾದ ಅರ್ಹತೆ, ಪಾಲಿಟೆಕ್ನಿಕ್‌ಗಳು, ಕೋರ್ಸ್‌ಗಳು, ಮೀಸಲಾತಿ ವಿವರ, ವಿವಿಧ ಮೀಸಲಾತಿಯಡಿಯಲ್ಲಿ ಕಾದಿರಿಸಲಾಗಿರುವ ಸ್ಥಾನಗಳ ವಿವರ ಮುಂತಾದ ಮಾಹಿತಿಯನ್ನು ಅರ್ಜಿಯ ಜೊತೆ ನೀಡಲಾಗುವ ಮಾಹಿತಿ ಪುಸ್ತಕದಲ್ಲಿ ನಮೂದಿಸಲಾಗಿದೆ. ಅಲ್ಲದೆ, ವಿವಿಧ ಪ್ರಮಾಣ ಪತ್ರಗಳ ನಮೂನೆಯನ್ನೂ ಸಹ ಮಾಹಿತಿ ಪುಸ್ತಕದಲ್ಲಿ ಮುದ್ರಿಸಲಾಗಿದೆ. ಈ ನಮೂನೆಗಳಲ್ಲಿ ಸಂಬಂಧಿಸಿದ ಎಲ್ಲಾ ಪ್ರಮಾಣ ಪತ್ರಗಳನ್ನು ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿ ನಮೂನೆ ಜೊತೆಯಲ್ಲಿ ಸಂಬಂಧಿಸಿದ ಮೂಲ ದಾಖಲೆಗಳ ಪ್ರತಿಗಳನ್ನು ಕಡ್ಡಾಯವಾಗಿ ಆನ್‌ಲೈನ್ ಅರ್ಜಿ ಸಲ್ಲಿಕೆ/ದಾಖಲೆ ಪರಿಶೀಲನಾ ಕೇಂದ್ರ (Online Application Submission/Document

Verification Centre) ಇಲ್ಲಿ ಹಾಜರುಪಡಿಸಿ ಪರಿಶೀಲಿನೆಗೊಳಪಟ್ಟ ನಂತರ ನೋಂದಾಯಿಸಿಕೊಳ್ಳುವುದು. ನೋಂದಾಯಿಸಿಕೊಂಡ ಅಭ್ಯರ್ಥಿಗಳಿಗೆ ನಿಗಧಿತ ನಮೂನೆಯಲ್ಲಿ ಸ್ವೀಕೃತಿ ಕಾರ್ಡ್ (Acknowledgement Card) ನೀಡಲಾಗುವುದು. ಈ ಸ್ವೀಕೃತಿ ಕಾರ್ಡ್ (Acknowledgement Card) ಮತ್ತು ಆನ್‌ಲೈನ್ ಮುಖಾಂತರ ಭರ್ತಿ ಮಾಡಿದ ಅರ್ಜಿಯ ಪ್ರತಿಯನ್ನು ಸೀಟು ಆಯ್ಕೆ ಪ್ರಕ್ರಿಯೆ ಹಾಗೂ ಪ್ರವೇಶ ಪಡೆಯುವ ಸಂದರ್ಭದಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು ಹಾಗೂ ಮಾಹಿತಿ ಪುಸ್ತಕದಲ್ಲಿ ನಮೂದಿಸಿರುವ ಸೂಚನೆಗಳನ್ನು ಸ್ಪಷ್ಟವಾಗಿ ಓದಿಕೊಂಡು ಅರ್ಜಿಯನ್ನು ಭರ್ತಿಮಾಡಬೇಕೆಂದು ತಿಳಿಸಲಾಗಿದೆ.

4. ಡಿಪ್ಲೋಮಾ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳ ಮೆರಿಟ್ ಲಿಸ್ಟ್ ಪಟ್ಟಿಯನ್ನು ಹಾಗೂ ಪ್ರವೇಶಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್ **www.dtekarnataka.in**, **www.diplomaadmission.in** & **www.dte.kar.nic.in** ಗಳಲ್ಲಿ ಪ್ರಕಟಿಸಲಾಗುವುದು.

ನಿರ್ದೇಶಕರು.
18/5/13

ರಾಜ್ಯದ 11 Online Interactive Cunseling ಕೇಂದ್ರಗಳ ಪ್ರಿನ್ಸಿಪಾಲರು/ಅಧ್ಯಕ್ಷರು ಹಾಗೂ

ಎಲ್ಲಾ ಸರ್ಕಾರಿ/ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ

**ಪ್ರತಿ ಮಾಹಿತಿಗಾಗಿ:-**

1) ಕಾರ್ಯದರ್ಶಿ, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
2) ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ.
3) ನಿರ್ದೇಶಕರ ಆಪ್ತ ಶಾಖೆಗೆ.
4) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ.
5) ಎಸ್.ಟಿ.ಎಲ್, ಡಿವಿಪಿ(1) ಮತ್ತು ಡಿವಿಪಿ(2) ವಿಭಾಗಕ್ಕೆ.
6) ಇಆರ್‌ಎಸ್ ವಿಭಾಗಕ್ಕೆ – ಮೇಲ್ಕಂಡ ಅವಧಿಯಲ್ಲಿ ಕರ್ನಾಟಕೇತರ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ನೀಡುವ ಬಗ್ಗೆ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.